doc-134
T.P-2.

SATYAVADI Founded 1917 Regd. No. M 1299.

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 29 ಸಂಚಿಕೆ 162] ಮಂಗಳವಾರ 5—3—46 [ಬಿಡಿ ಪ್ರತಿ 3 ಪೈ

ಕಾ॥ ಲಕ್ಷ್ಮಿ ಡೆಲ್ಲಿಗೆ ಬಂದಳು

ಗೌರ್ನರರ ಸಮ್ಮೇಳನ

ಬ್ರಿಟೈನಿನಿಂದ ಕೆಬನೆಟ್ ಪ್ರತಿನಿಧಿದಳವು ಭಾರತಕ್ಕೆ ಬರುವ ಮುನ್ನ ಪ್ರಾಂತೀಯ ಗವರ್ನರರ ಸಮ್ಮೇಳನವೊಂದು ದಿಲ್ಲಿಯಲ್ಲಿ ಜರಗುವ ಸಂಭವವಿದೆ. ಈ ಸಮ್ಮೇಳನದಲ್ಲಿ ಆಹಾರದ ಕುರಿತಾದ ಪ್ರಶ್ನೆಯೂ ಚರ್ಚಿಸಲ್ಪಡಬಹುದು

ಜಪಾನಿನಿಂದ ೭ ಕೋಟಿ ಗಜ ರೇಷ್ಮೇದಾರದ ರವಾನೆ

ಜಪಾನಿಗೆ ಅಗತ್ಯವಿರುವ ಪದಾರ್ಥಗಳನ್ನು ತರಿಸುವ ಸಲುವಾಗಿ ಜಪಾನಿನಿಂದ ಪ್ರಕಟಿಸುವ ಸಾಮಾನಿನ ಪಟ್ಟಿಯನ್ನು ಜನರಲ್ ಮೆಕಾರ್ಥರ ಕಛೇರಿಯಿಂದ ಪ್ರಕಟನೆ ಹೊರಟಿದೆ ಆ ಪಟ್ಟಿಯನ್ನು ಒಪ್ಪಿಗೆಗಾಗಿ ವಾಷಿಂಗ್‌ಟನ್ನಿನಿಗೆ ಕಳಿಸಲಾಗಿದೆ. ಜೆಪಾನ್ ಯುದ್ಧಕ್ಕೆ ಮೊದಲು ಸೆರವಾಸಿಸುತ್ತಿದ್ದ ಪ್ರಮಾಣದಲ್ಲಿ ಕಾಲು ಭಾಗವಾಗುತ್ತಿದೆ ಈ ಪಟ್ಟಿಯಲ್ಲಿರು ಮಂತೆ 7 ಕೋಟಿ 50 ಲಕ್ಷ ಗಜ ರೇಷ್ಮೆ ದಾರ ಮತ್ತು ರೇಯಾನ್ 80 ಸಾವಿರ ಬೇಲು ಕಚ್ಚಾ ರೇಷ್ಮೆ ಮತ್ತು ಇತರ ವಸ್ತುಗಳು ಕಳಿಸಲ್ಪಟ್ಟಿರುವುವು.

ಹಾಲೆಂಡಿನಲ್ಲಿ ಪ್ರದರ್ಶನವಿಲ್ಲ

ಅಮೇರಿಕ್ಕ ಚಿತ್ರಗಳ ದರ ತೀರಾ ಹೆಚ್ಚೆಂಬ ಕಾರಣದ ಮೇಲೆ ನೆದರ್ಲೆಂಡ್ಸ್ ಸಿನಿಮಾ ಯೂನಿಯನ್ನಿನವರು ಆ ವ್ಯವಗಳನ್ನು ಹಾಲೆಂಡಿನಲ್ಲಿ ಪ್ರದರ್ಶಿಸುವುದನ್ನು ನಿಲ್ಲಿಸುವ ಹಂಬಿಕೆಯಲ್ಲಿದ್ದಾರೆ ಎಂದು ಪ್ರಕಟವಾಗಿದೆ

೬ನೇ ಗಂಡ ಬರುವನೇ ?

ಹೋಲೀವುಡ್ಡಿನ ಮಾಜಿ ಪ್ರಸಿದ್ಧ ನಟಿ ಗ್ಲೋರಿಯಾ ಸ್ವೆನ್ಸನ್ನಳು ಐದನೇ ಸಾರಿ ವಿವಾಹ ವಿಚ್ಛೇದನೆ ಮಾಡಿಕೊಂಡಳಂತೆ ! ಈ ಪುಣ್ಯಾತಗಿತ್ತಿ ಮತ್ತೆ ಮದುವೆಯಾದರೆ 6 ನೇ ಗಂಡ !

ವಿದ್ಯಾರ್ಥಿಗಳ ನಿರ್ಧಾರ

ಈಜಿಪ್ಟಿನ ವಿದ್ಯಾರ್ಥಿ ನಾಯಕನು ಹೀಗೆ ಹೇಳಿರುತ್ತಾನೆ— ಈಜಿಪ್ಟು ವಿದ್ಯಾರ್ಥಿಗಳು ವಿದೇಶೀ ಸೇನೆಗಳು ದೇಶವನ್ನು ಬಿಟ್ಟು ಹೊರಟು ಹೋದಲ್ಲದೆ ಪಾಠಶಾಲೆಗಳಿಗೆ ಹೋಗುವುದಿಲ್ಲ.

ಕೊಪ್ಪರ್ ಲಕ್ಷ್ಮಿ

ಕ್ಯಾಪ್ಟ್ ಲಕ್ಷ್ಮಿಯವರಿನ್ನು ಕಾಲ್ವಾ (ಬರ್ಮಾ) ಅರಣ್ಯ ಮಧ್ಯದಲ್ಲಿ ಬಂಧನದಲ್ಲಿಟ್ಟಿದ್ದಾಗ ಆಕೆಗೆ ಅಕ್ಕಿ, ಉಪ್ಪು ಏನಹಾ ಬೇರೆ ಯಾವುದೂ ಕೊಡುತ್ತಿಲ್ಲವಂತೆ. ಓದಲು ಸ್ವೇಟ್ಸ್‌ಮೆಂಟ್ ಪತ್ರಿಕೆಯನ್ನು ಕೊಡುತ್ತಿದ್ದರಂತೆ

ಮೈಸೂರು

ಇವೇ ತಿಂಗಳು ತಾ॥ 27 ರಲ್ಲಿ ರಾಜಧಾನಿಯ ನಗರಾಭಿವೃದ್ಧಿ ಸಭೆ ಸೇರುವುದು.

ಇದೇ ಮಾಹೆ ತಾ॥ 30 ಪೌರಸಭೆಯ ಸಾಧಾರಣ ಸಭೆ ನಡೆಯುವುದು.

ಮೈಸೂರು ಹಾರ್ಡ್ವಿಕ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಮಿ॥ ಡಿ. ಸುಬ್ರಹ್ಮಣ್ಯರವರು "ಫಿಸಿಯಾಲಜಿ ಎಂಡ್ ಲೈಫ್" ವಿಷಯವಾಗಿ ಮಾಡ್ಯ ಪುರ ಭವನದಲ್ಲಿ 9 ನೇ ತಾರೀಖು ಶನಿವಾರ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಡುವರು

ನಿನ್ನೆಯ ದಿವಸ ಸಂಜೆ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಮಹಮದ್ ಪೈಗಂಬರರ ದಿನಾಚರಣೆಯನ್ನು ನಡೆಸಲ್ಪಟ್ಟಿತು.

ಜಾನ್ಸಿಯಲ್ಲಿ ಸೇರಿದ್ದ ಪ್ರಚಂಡ ಸಭೆಯಲ್ಲಿ ಪಂ॥ ನೆಹರು ಭಾಷಣಮಾಡುತ್ತಾ ಈ ವರ್ಷವೇ ಭಾರತ ಸ್ವಾತಂತ್ರ್ಯ ಘೋಷಣೆಯಾಗಬೇಕೆಂದೂ ಬ್ರಿಟಿಷ್ ನಿಯೋಗ ಸಫಲವಾಗದಿದ್ದರೆ ಕಟ್ಟ ಕಡೆ ಹೋರಾಟವೆಂದೂ ತಿಳಿಸಿದ್ದುವರು

ದೇಶದಲ್ಲಿ ಅನ್ನಾಭಾವ ಪ್ರಯುಕ್ತ ಹಾಸನದಲ್ಲಿ ಸೇರಿರುವ ಮೈಸೂರು ಕಾಂಗ್ರೆಸ್ ಮಹಾಧಿವೇಶನದ ಕಾರ್ಯಕಲಾಪಗಳೆಲ್ಲವೂ ಒಂದೇ ದಿವಸದಲ್ಲಿ ಮುಕ್ತಾಯವಾಗುವುದು.

ಕೇಂದ್ರ ಪಾರ್ಲಿಮೆಂಟು ಸದಸ್ಯರುವರು ಚುನಾವಣೆಗೆ ಆರಿಸಿದ ಉಮೇದುವಾರರ ಬಗ್ಗೆ ಮತಭೇದ ಉಂಟಾಗಿ ಶ್ರೀ ಸುಂದರಲಾಲರು ನಿರಶನವ್ರತವಾರಂಭಿಸಿರುವುದಾಗಿ ಜಬ್ಬಲ್ಪುರದ ವಾರ್ತೆ

ಮಾರ್ಚಿ 4 ರಲ್ಲಿ ಬಾಗುಲಿ ಸ್ಟೇಷನ್ನಿನ ಹತ್ತಿರ 2 ರೈಲುಗಳು ಡಿಕ್ಕಿ ಹೊಡೆದು 30 ಜನರು ಸತ್ತರು, 100 ಮಂದಿಗೆ ಗಾಯವಾಗಿದೆ.

ಮೇಲುಕೋಟೆ ವೈರಮುಡಿ ಉತ್ಸವವು ತಾ॥ 14 ರಲ್ಲಿ ನಡೆಯುವುದು.

ಕ್ಯಾ॥ ಲಕ್ಷ್ಮಿ

ಕಲ್ಕತ್ತಾ, ಮಾ 4 — ಆಜಾದ್ ಹಿಂದ್ ಫೌಜಿನ ಜಾನ್ಸಿದಳದ ಕ್ಯಾ॥ ಲಕ್ಷ್ಮಿಯವರು ನಿನ್ನೆ ದಿವಸ ಸಾಯಂಕಾಲ ಕಲ್ಕತ್ತಾವಿಗೆ ಆರ್. ಎ. ಎಫ್. ವಿಮಾನದಲ್ಲಿ ಹಾರಿಬಂದರು. ಡಂಡಂನಲ್ಲಿ ಶ್ರೀ ಸುಭಾಷ್‌ಚಂದ್ರ ಬೋಸರ ಸೋದರಳಿಯ ಅಣಜಿತ್ ಕುಮಾರ ಬೋಸರು, ದಿಲೀಪ್ ಕುಮಾರ ಬೋಸರು ತಮ್ಮ ಸಹೋದರಿ ಲಲಿತ ಮತ್ತು ಶೀಲ ಪೊಡಗೂಡಿ ಕ್ಯಾ॥ ಲಕ್ಷ್ಮಿಗೆ ಸುಸ್ವಾಗತವಿತ್ತರು. ಭಾರತ ರಾಷ್ಟ್ರೀಯ ವಿಮಾನದಲ್ಲಿ ಈ ವಧ್ಯಾಹ್ನ ದೆಹಲಿಗೆ ಹೋಪರು. ನಿನ್ನೆ ದಿವಸ ರಾತ್ರಿ ಅವರು ಸುಭಾಷ್‌ಬೋಸರ ಮನೆಯಲ್ಲಿ ಇಳಿದುಕೊಂಡಿದ್ದರು. ಕ್ಯಾ॥ ಲಕ್ಷ್ಮಿ ದೆಹಲಿ ತಲುಪುವವರೆಗೂ ಅವರ ಅಗಮನ ರಹಸ್ಯವಿರಬೇಕೆಂದು ಅಮ್ಮ ಸ್ವಾಮಿನಾಥರು ಕಲ್ಕತ್ತೆಗೆ ತಂತಿ ಮಾಡಿದ್ದರು.

ಹೋಳ್ಕರ'ನ ಪ್ರಚಂಡ ಆಟ

ಇಂದೂರು, ಮಾ 1 — ಮೈಸೂರಿಗೂ ಹೋಳ್ಕರಿಗೂ ನಡೆಯುತ್ತಿರುವ ರಣಜಿ ಟ್ರೊಫಿ ಕ್ರಿಕೆಟ್ ಪಂದ್ಯದಲ್ಲಿ ಹೋಳ್ಕರ್ ಟೀಂನವರು 8 ವಿಕೇಟುಗಳಿಗೆ 9.2 ರನ್ನುಗಳನ್ನು ಹೊಡೆದು ಆಟವನ್ನು ಬಿಟ್ಟರು. ಮೈಸೂರಿನವರು 12 ಕ್ಯಾಚು ಗಳನ್ನು ಬಿಟ್ಟರು. ಮೈಸೂರಿನ ಫೀಲ್ಡಿಂಗ್ ಅವ್ಯವಸ್ಥೆಯಾಗಿತ್ತು. ಗದುಡಾ ಚಾಮ್ಪಿಯರ ಬೌಲಿಂಗ್ ಸ್ವಲ್ಪ ಉತ್ತಮ.

ಮದರಾಸು ಗೋಳೀಬಾರು

ಜಸ್ಟಿಸ್ ಬಾಯರ್ಸರ ಗುಂಡಿನ ಏಟಿನಿಂದ ಒಬ್ಬ ಹುಡುಗನು ಮರಣಹೊಂದಿದ ವಿಚಾರವನ್ನು ಕಲಾಕುಶಲವಾಗಿ ಪೋಲೀಸು ತನಿಖೆನಡೆಯಲು ಮದರಾಸು ಸರಕಾರದವರು ಆಜ್ಞೆ ಮಾಡಿದ್ದಾರೆ ಪೀನಲ್ ಕೋಡು 304 ನೇ ಸೆಕ್ಷನ್ ಮೇರೆ ಕೇಸು ರಿಜಿಸ್ಟರಾಗಿದೆ.

ವಿವಿಧ ವರ್ತಮಾನ

ದಿ ಹೇಗ್, ಮಾ 1 —ಜಪಾನಿನ ಯುದ್ಧಾಪರಾಧಿಗಳ ವಿಚಾರಣೆಯು 1 ವರ್ಷ ನಡೆಯಬಹುದೆಂದು ಹೇಳಲಾಗಿದೆ.

ಮಾಸ್ಕೋ, ಮಾ 1—ಲೆನಿನ್ನಿನ ಶವಕ್ಕೆ ಬಳೆದಿರುವ ಲೇಪನದಿಂದ ದೇಹವು ಎಂದೆಂದಿಗೂ ಕೆಡದಂತಿರುವುದೆಂದು ಹೇಳಲಾಗಿದೆ ಅದು ಒಂದು ಗಾಜಿನ ಕರಂಡಿಯಲ್ಲಿಟ್ಟಿದೆ. ಮಾಸ್ಕೋ ಕೆಂಪು ಚೌಕದಲ್ಲಿದೆ. ಜರ್ಮನಿಯ ಜನರು ಯಾತ್ರಾರ್ಥಿಗಳಾಗಿ ಸೇರಿದ್ದರು.

ಮದರಾಸು, ಮಾ 3— ಈ ದಿವಸ ಕುದುರೆ ಜೂಜಿನಲ್ಲಿ 18 ಟ್ರಿಬಲ್ ಟಿಕೇಟುಗಳಿಗೆ ತಲಾ ರೂ 2529 ದೊರೆಯಿತು

ಲಂಡನ್, ಮಾ 2—ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಬದಲಾವಣೆಗಳಾಗುವುವೆಂದೂ, ಕ್ರಿಪ್ಸರು ಇಂಡಿಯಾ ಆಫೀಸಿಗೆ ಹೋಗುವರೆಂದೂ, ಭಾರತ ನಿಯೋಗಾನಂತರ ಪಥಿಕ್ ಲಾರೆನ್ಸರು ನಿವೃತ್ತರಾಗುವರೆಂದೂ ಹೇಳಲಾಗಿದೆ,

ಟೋಕಿಯೊ— ಹಿರೋಷಿಮಾದಲ್ಲಿ ಹಾಕಿದ ಅಣು ಬಾಂಬುಗಳಿಂದ 303545 ಸಾವು ನೋವಾಗಿದೆಯೆಂದು ಹೇಳಲಾಗಿದೆ.

ಕಲ್ಕತ್ತಾ, ಮಾ2—ಈ ದಿವಸ ಕುದುರೆ ಜೂಜಿನಲ್ಲಿ 9 ಟ್ರಿಬಲ್ ಟಿಕೇಟುಗಳಿಗೆ ತಲಾ ರೂ 7389—3—0 ದೊರೆಯಿತು.

ಸೀಮೆಂಟು ಪರಿಕ್ರಮಕ್ಕೆ ಇಂಡಿಯಾ ಸರಕಾರವು ಹೆಚ್ಚು ಪ್ರೋತ್ಸಾಹ ಕೊಡಲು ನಿರ್ಧರಿಸಿದೆ.

ಸ್ತ್ರೀಯರಿಗೆ ನೌಕರಿ

ಶಿಕ್ಷಣ ಹೊಂದಿ ಪದವೀಧರರಾಗಿರುವ ತಕ್ಕ ಮಹಿಳೆಯರಿಗೆ ವಿದ್ಯಾಭ್ಯಾಸ, ಆರೋಗ್ಯ, ವೈದ್ಯ ಮತ್ತು ರೆವಿನ್ಯೂ ಇಲಾಖೆಗಳಲ್ಲೂ, ಅಠಾರಾ ಕಛೇರಿಗಳಲ್ಲೂ ಕೆಲಸಗಳನ್ನು ಕೊಡಬೇಕೆಂದು ಪಬ್ಲಿಕ್ ಸರ್ವಿಸ್ ಕಮಿಷನರು ಮಾಡಿದ್ದ ಶಿಫಾರಸ್ಸನ್ನು ಮೈಸೂರು ಸರಕಾರದವರು ಅಂಗೀಕರಿಸಿ ಆಜ್ಞೆ ಹೊರಡಿಸಿದ್ದಾರೆಂದು ತಿಳಿಯುಬಂದಿದೆ.

ಅಹಿಂಸೆ

"ಕಲ್ಲುಗಳಿಂದ ಹೊಡೆದು ಬ್ರಿಟೀಷರನ್ನು ಹೊರಡಿಸಲಾರೆವು" ಎಂದು ಗಾಂಧಿಜಿಯವರು ಹೇಳುತ್ತಿರುವರು.

ಇಂಡಿಯಾದಲ್ಲಿ ರಷ್ಯಾ ಭಾಷೆ

ಇಂಡಿಯಾದೇಶದ ಮುಖ್ಯ ವಾದ ಮೂರು ವಿಶ್ವವಿದ್ಯಾ ನಿಲಯಗಳಲ್ಲಿ ರಷ್ಯಾ ಭಾಷೆಯನ್ನು ಕಲಿಸಲು ಏರ್ಪಾಡಾಗುತ್ತಿದೆಯೆಂದು ವರ್ತಮಾನ.

ಧಿಲ್ಲಾನರ ಶಾಂತಿ ನುಡಿ

ನನ್ನ ಜಿಡುಗಡೆಯ ತರುವಾಯ ಇಂಡಿಯಾದಲ್ಲಿ ನಾನು ಕಂಡದ್ದರಲ್ಲಿ ಇಂದಿನ ಪರಿಸ್ಥಿತಿಗಳಲ್ಲಿ ಬ್ರಿಟಿಷರೊಂದಿಗೆ ಹೋರಾಡಲು ಅಹಿಂಸಾ ಮಾರ್ಗವೇ ಉತ್ತಮವಾದದ್ದೆಂದು ಕಂಡುಬಂದಿದೆ. ಎಂದು ಸರದಾರ್ ಗುರುಭಕ್ಷ್ ಸಿಂಗ್ ಧಿಲ್ಲಾರವರು ಅಭಿಪ್ರಾಯಪಟ್ಟಿರುವರು.

ನೈಜಾಮರ ಯೋಜನೆ

ಹೈದರಾಬಾದು ನಿಜಾಮು ಸರಕಾರವು ಹೆಚ್ಚು ಲಾಭ ಪಡೆದ ಕ್ಷೇತ್ರದ ಆದಾಯದಲ್ಲಿ ೨ ಲಕ್ಷ ರೂಪಾಯಿಗಳನ್ನು ಗ್ರಾಮೋದ್ಯೋಗಿಗಳ ಬಿ ಪಿಪಿಗೆಗಾಗಿ ತೆಗದಿಡಲ್ಪಟ್ಟಿರುವುದೆಂದು ವಾಣಿಜ್ಯ ಸಚಿವರು ಮಹಳಾ ಸಭೆಯೊಂದರಲ್ಲಿ ತಿಳಿಸಿರುವರು.

ಇಂಡೋನೇಷಿಯಾ

ಇಂಡೋನೇಷಿಯೊಕ್ಕೆ ಡೊಮಿನಿಯನ್ ಸ್ಟೇಟಸ್ ಕೊಡುವುದಾಗಿ ಡಚ್ ಸರ್ಕಾರದವರು ಪ್ರಕಟಿಸಿರುವರು. ಮಧ್ಯಸ್ಥಿಕೆಯು ಏರ್ಪಟ್ಟಲ್ಲಿ ಪರಿಷ್ಕಾರವಾಗಬಲ್ಲದೆಂದು ಇಂಡೋನೇಷಿಯಾ ನಾಯಕನು ಅಭಿಪ್ರಾಯಪಟ್ಟಿರುವನು

ವಿಮಾ ಓಡಾಟ

ಲಂಡನ್ ಮತ್ತು ಪ್ಯಾರಿಸ್ಸಿಗೆ ಪ್ರತಿ ಘಂಟೆಗೆ ಒಂದು ಸಾರಿ ಒರ್ ಬಸ್ ವ್ಯವಸ್ಥೆ ಮಾಡಲಾಗುವುದೆಂದು ಅಂಗ್ಲೋ-ಫ್ರೆಂಚ್ ವಿಮಾನ ಒಪ್ಪಂದಕ್ಕೆ ಸಹಿ ಮಾಡುವ ಕಾಲಕ್ಕೆ ವಿಮಾನ ಶಾಖಾ ಮಂತ್ರಿಯವರು ತಿಳಿಸಿದರು

ವಿಮಾನ ಕೊಂಡುಕೊಂಡರು

ಮೈಸೂರು ಸರಕಾರದವರು 130 ಸಾವಿರ ರೂ. ಬೆಲೆಯ ವಿಮಾನ ಒಂದನ್ನು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯವರಿಂದ ಕೊಂಡಿದ್ದಾರೆಂದು ತಿಳಿಯಬಂದಿದೆ.

ನಕ್ಕಿದರೆ ಜಗಳ ಏಕೆ ?

'ಕಚ್ಚಾ ಪದಾರ್ಥಗಳ ಹಂಚಿಕೆಯು ಸಮವಾಗಿ ಆದಲ್ಲಿ ಯುದ್ಧಗಳು ನಡೆಯದಂತೆ ಮಾಡಬಹುದು' ಎಂದು ನುಡಿದ ಸ್ಟಾಲಿನ್ನರೊಂದಿಗೆ ನಾನು ಏಕೀಭವಿಸುತ್ತೇನೆ ಎಂಬದಾಗಿ ಅಮೇರಿಕಾ ಸೆನೇಟರು ಅಭಿಪ್ರಾಯವಟ್ಟಿದ್ದಾರೆ.

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಪುನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂಧ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ಏವರಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;

ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು — ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

At Ranjit

Vijay Laxmi

ಶೋಭನ ಸಮರ್ಥ

ಮೋತೀಲಾಲ್

ಮುಂತಾದವರು ಪಾತ್ರವಹಿಸಿರುವ

ವಿಜಯಲಕ್ಷ್ಮಿ

ಹಸಕ್ ಬೆಟ್ಟದಪುರದ

ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

ರಾವಂದೂರ್ ವೀರಶೆಟ್ಟಿ & ಸನ್

ಶಿವರಾಂಪೇಟೆ ಮೈಸೂರು.

At Opera —

4 ನೇ ವಾರ

ಪರಂಜ್ಯೋತಿ

From 8-3-46

ಮೆಹತಾಬ್ — ಸುರೇಂದ

ಪಾತ್ರವಹಿಸಿರುವ

ವಿಶ್ವಾಸ್

Edited, Printed and published by M. S. Krishna Rao, at the Satvavadi Press, Chamaraja Agrahar, Mysore